**ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್-65ರಲ್ಲಿ ಆನ್‌ಲೈನ್ (Zoom App) ಮೂಲಕ ದಿನಾಂಕ:06-02-2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ**

## ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ-65 ಕಾಡುಮಲ್ಲೇಶ್ವರ** **ಸಮಯ ಬೆಳಿಗ್ಗೆ 11:30 ಘಂಟೆಗೆ**

ದಿನಾಂಕ: 06-02-2021 ರಂದು ವಾರ್ಡ್ ಸಂಖ್ಯೆ:65ರ ಫೆಬ್ರವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಆನ್‌ಲೈನ್ (Zoom App) ಮೂಲಕ ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ವಾರ್ಡ್-65ರ ಸಹಾಯಕ ಇಂಜಿನಿಯರ್ 2019-20ನೇ ಹಾಗೂ 2020-21ನೇ ಸಾಲಿನ ವಾರ್ಡಿನಲ್ಲಿ ಅನುಮೋದನೆಯಾಗಿರುವ ಮತ್ತು ಅನುಮೋದನೆಯಾಗಬೇಕಾಗಿರುವ ಕಾಮಗಾರಿಗಳ ಬಗ್ಗೆ ಸಭೆಗೆ ಸಾರ್ವಜನಿಕರಿಗೆ ತಿಳಿಸಿರುತ್ತಾರೆ.

- ಬೆಂಗಳೂರು ನೀರು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಇಂಜಿನಿಯರ್ ರವರು ವಾರ್ಡ್-65ರಲ್ಲಿ ನಡೆಯುತ್ತಿರುವ ಕಾಮಗಾರಿಗಳು ಈ ತಿಂಗಳೊಳಗೆ ಮುಗಿಸುವುದಾಗಿ ತಿಳಿಸಿದರು.

- ವಿದ್ಯುತ್ ಇಲಾಖೆಯವರು ಸಭೆಗೆ ಗೈರುಹಾಜರಾಗಿರುತ್ತಾರೆ. ಆದ ಕಾರಣ ನೋಡಲ್ ಅಧಿಕಾರಿಗಳು ಪತ್ರದ ಮೂಲಕ ಮುಂದಿನ ಸಭೆಗೆ ಹಾಜರಾಗಲು ಸೂಚಿಸುವಂತೆ ತಿಳಿಸಿರುತ್ತಾರೆ.

- ಮಾರ್ಗೋಸಾ ರಸ್ತೆಗಳಲ್ಲಿ ನಡೆಯುತ್ತಿರುವ ಟೆಂಡರ್ ಶ್ಯೂರ್ ಕಾಮಗಾರಿಯ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದು, ಕಾಮಗಾರಿಯ ಬಗ್ಗೆ ವಿವರವಾಗಿ ತಿಳಿಸಿ ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ಪರಿವೀಕ್ಷಿಸಲು ಸಭೆಗೆ ತಿಳಿಸಿರುತ್ತಾರೆ.

- 11ನೇ ಮುಖ್ಯರಸ್ತೆ ಮತ್ತು 8ನೇ ಮುಖ್ಯರಸ್ತೆಯಲ್ಲಿ ಮೇಜರ್ ರಸ್ತೆ ಪಶ್ಚಿಮ ವಲಯದಿಂದ ಕಾಮಗಾರಿಗಳು ನಡೆಯುತ್ತಿದ್ದು, ಕಾಮಗಾರಿಗಳ ಬಗ್ಗೆ ಸಾರ್ವಜನಿಕರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಮಗಾರಿಯ ಬಗ್ಗೆ ತಿಳಿಸುತ್ತಾ ಹಾಗೂ ಪಾದಚಾರಿ ಮಾರ್ಗಗಳ ಬಗ್ಗೆ ಸಾರ್ವಜನಿಕರು ಕೇಳಿದ ಪ್ರಶ್ನೆಗಳಿಗೆ ಮುಂದಿನ ದಿನಗಳಲ್ಲಿ ಸಾರ್ವಜನಿಕರೊಂದಿಗೆ ಪರಿವೀಕ್ಷಿಸಲು ಸಭೆಗೆ ತಿಳಿಸಿರುತ್ತಾರೆ.

Scanned with CamScanner

➢ ಕಾಡು ಮಲ್ಲೇಶ್ವರ ವಾರ್ಡಿನ ಘನತ್ಯಾಜ್ಯ ವಿಭಾಗದ ಶ್ರೀ ವೆಂಕಟೇಶ್ ರವರು ಘನತ್ಯಾಜ್ಯದ ಬಗ್ಗೆ ವಿವರ ನೀಡುತ್ತಾ ಬಿಬಿಎಂಪಿಯ ಘನತ್ಯಾಜ್ಯ ನಿರ್ವಹಣೆಯಲ್ಲಿ ವಾರ್ಡ್ 7ನೇ ಸ್ಥಾನದಲ್ಲಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು ಮತ್ತು 11ನೇ ಮುಖ್ಯರಸ್ತೆಯಲ್ಲಿರುವ ಕಾಂಪೌಂಡ್ ಗೋಡೆಗೆ ಬಣ್ಣ ಬಳಿಯುವುದಾಗಿ ತಿಳಿಸಿರುತ್ತಾರೆ.

➢ ವಾರ್ಡ್–65 ಆರೋಗ್ಯ ಇಲಾಖೆಯ ಹಿರಿಯ ಆರೋಗ್ಯ ಪರಿವೀಕ್ಷರು ಸಭೆಯಲ್ಲಿ ಹಾಜರಿದ್ದು, ವಾರ್ಡಿನಲ್ಲಿ ಇದುವರೆವಿಗೂ 1215 ಕೋವಿಡ್–19 ಸೋಂಕಿಗೆ ಒಳಪಟ್ಟಿರುತ್ತಾರೆ. ಹಾಗೂ ಕೋವಿಡ್–19 ಸೋಂಕಿನಿಂದ 19 ಜನ ಮರಣ ಹೊಂದಿದ್ದು, 1193 ಜನ ಕೋವಿಡ್–19 ಸೋಂಕಿನಿಂದ ಗುಣಮುಖರಾಗಿ ಮನೆಗೆ ತೆರಳಿರುತ್ತಾರೆ. 3 ಜನ ಕೋವಿಡ್–19 ಸೋಂಕಿತರು ಚಿಕಿತ್ಸೆ ಪಡೆಯುತ್ತಿರುತ್ತಾರೆ. ಮೊದಲ ಹಂತದಲ್ಲಿ 663 ಜನಕ್ಕೆ ಲಸಿಕೆಯನ್ನು ನೀಡಿರುತ್ತಾರೆ.

➢ ಅರಣ್ಯ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದು, 15ನೇ ಅಡ್ಡರಸ್ತೆ ಹಾಗೂ 6ನೇ ಮುಖ್ಯರಸ್ತೆಯಲ್ಲಿ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ತಿಳಿಸಿರುತ್ತಾರೆ ಅದಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ತೆರವುಗೊಳಿಸುತ್ತೇವೆಂದು ಸಭೆಗೆ ತಿಳಿಸಿರುತ್ತಾರೆ.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,

(ಸಹಿ) 15-6-21.

ಸಹಾಯಕ ಅಭಿಯಂತರರು, ವಾರ್ಡ್–65
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner